ಪೌರುಷದ ಪ್ರಖರತೆಯನ್ನು ಮುಗ್ಧವಾಗಿ ನೋಡಿದಳು. ‘‘ಸರಿ, ಹಾಗಿದ್ದರೆ ಇನ್ನೊಂದು ವಿಷಯನ್ನೂ ಕೇಳಲಾ?’’ ಅವಳು ನಕ್ಕು ಅಂದಳು, ‘‘ನೀನು ಇದುವರೆಗೂ ಯಾಕೆ ನನ್ನ ಕಣ್ಣುಗಳ ಕಡೆಗೆ ನೋಡೇ ಇಲ್ಲ?’’

ಅಲಿಯ ನೋಟ ಅವಳ ಕಡೆಗೆ ಹೊಳೆಯಾಗಿ ಹರಿಯಿತು. ‘‘ಅಫ್ಘಾನಿ ಗಂಡಸು ನೇರವಾಗಿ ನೋಡೋದು ಅವನ ಹೆಂಗಸಿನ ಕಣ್ಣುಗಳನ್ನು ಮಾತ್ರ.’’ ಆ ಕಣ್ಣುಗಳು ಅರಳಿದವುಗಳಲ್ಲ. ಸಮುದ್ರವನ್ನು ಅಡಿಗಿಸಿಟ್ಟಿಲ್ಲ. ಬಂಗಾರದ ಹನಿಗಳನ್ನು ಸಿಂಪಡಿಸುವ ರೈನಾಳ ಕಣ್ಣುಗಳನ್ನು ತುಂಬಿಕೊಂಡು ಅವನು ಇನ್ನೂ ಸ್ವಲ್ಪ ಮುಂದೆ ಸರಿದ. ‘‘ಹಾಗಲ್ಲದೆ ಹೋದ್ರೆ ಪರ್ವತಗಳ ನರ ನಾಡಿಯಲ್ಲಿ ಬಿರುಕು ಬೀಳುತ್ತೆ. ಕಣಿವೆಗಳ ಮಣ್ಣಿನಲ್ಲಿ ಬೆಂಕಿ ಹರಡಿ, ಊರು ನಾಶವಾಗಿ ಹೋಗುತ್ತೆ. ಇದೆಲ್ಲ ನಮ್ಮ ಅಫ್ಘಾನಿಗಳ ನಂಬಿಕೆ.’’

ರೈನಾ ಎದ್ದುನಿಂತಳು. ನಾಲ್ಕು ದಿಕ್ಕುಗಳಿಂದಲೂ ಹಾರಿಬಂದ ಸಂಶಯದ ನೋಟಗಳನ್ನು ತಿರಸ್ಕರಿಸಿ ಅವಳು ಅಲಿಯ ಮುಖವನ್ನು ಬೊಗಸೆಯಲ್ಲಿ ಹಿಡಿದಳು. ನಂತರ ಅವನ ತೆಳುವಾದ ತುಟಿಗಳಿಗೆ ಮೆತ್ತಗೆ ಚುಂಬಿಸಿದಳು.

‘‘ಇದು ನನ್ನ ಮತ್ತೆ ನಿನ್ನ ಕಾಣೆಯಾದ ದೇಶಗಳಲ್ಲಿ ಬಿರುಕು ಬೀಳುವುದನ್ನೂ ಮಣ್ಣಿನಲ್ಲಿ ಬೆಂಕಿ ಹತ್ತುವುದನ್ನೂ ತಪ್ಪಿಸಲಿಕ್ಕಾಗಿ.’’

ಅವಳು ಮೆಲುದನಿಯಲ್ಲಿ ಹೇಳಿದಳು: ‘‘ಈ ನಿಮಿಷದ ಮಟ್ಟಿಗೆ ನಾನು ನಿನ್ನ ಹುಡುಗಿ.’’

ಸುತ್ತಲೂ ಸ್ಫೋಟಗೊಂಡ ಭೂಕಂಪ, ಬಿರುಗಾಳಿಗಳ ಬೆಂಕಿಯ ಜ್ವಾಲೆಯ ಮಧ್ಯದಲ್ಲೂ ಅವಳ ಕಣ್ಣಿನ ಬಿಸಿಲ ಕಾವನ್ನು ಅಲಿ ನೋಡಿದ. ಪರ್ವತಗಳ ನೆರಳನ್ನೂ ಕಲ್ಲು ದಾರಿಗಳ ಚಳಿಯನ್ನೂ ಅಡಗಿಸಿಟ್ಟ ಒಂದು ತಂಗಾಳಿಯನ್ನು ಅರಿತವಳಂತೆ ಅವಳು ತನ್ನ ಉದ್ದವಾದ ಕೈಬೆರಳುಗಳನ್ನು ಅವನ ಮುಖದ ಕಡೆಗೆ ಎತ್ತಿದಳು. ಅವರ ಸುತ್ತಲೂ ಕಳೆದುಹೋದ ಭೂಖಂಡವೊಂದು ತಣಿದು ಗಟ್ಟಿಯಾಯಿತು.

**ಸಿತಾರಾ ಎಸ್.**

ಮಲಯಾಳಂನ ಹೊಸ ತಲೆಮಾರಿನ ಕತೆಗಾರ್ತಿ. ನೇರ, ದಿಟ್ಟ ಹಾಗೂ ವೈವಿಧ್ಯಮಯ ವಿಷಯಗಳು ಅವರ ಬರವಣಿಗೆಯ ಪ್ರಮುಖ ಅಂಶಗಳು. ಹೆಣ್ಣಿನ ಸ್ವಾತಂತ್ರ್ಯದ ಆಸೆ, ದಲಿತರ ಮನೋವ್ಯಥೆ, ಸಲಿಂಗಿಗಳ ತುಮುಲ, ಕೋಮುವಾದದ ದಳ್ಳುರಿ, ಪ್ರಕೃತಿಯ ಹಕ್ಕುದಾರರು, ಸಮಾಜದ ಕಪಟತೆ ಅವರ ಕಥಾವಸ್ತುಗಳು. ಅವರ ಅನೇಕ ಕತೆಗಳ ಪಾತ್ರಗಳು ಸಮಾಜದ ‘ಮಾದರಿ ಹುಡುಗಿ’ ಎಂಬ ಕಲ್ಪನೆಗೆ ವಿರುದ್ಧವಾದವುಗಳು ಎಂದು ಮಲಯಾಳಂ ಕತೆಗಾರ್ತಿ ಸಾರಾ ಜೋಸೆಫ್ ಅಭಿಪ್ರಾಯಪಡುತ್ತಾರೆ. 15 ವರ್ಷಗಳ ಕಾಲ ಕುಟುಂಬದೊಂದಿಗೆ ಯು.ಎ.ಇ ಹಾಗೂ ಸೌದಿ ಅರೇಬಿಯಾದಲ್ಲಿ ವಾಸವಿದ್ದ ಸಿತಾರಾ ಅವರ ಅನೇಕ ಕತೆಗಳಿಗೆ ಆ ಪ್ರದೇಶಗಳ ಹಿನ್ನೆಲೆಯಿದೆ.

**ಕೃಷ್ಣಮೂರ್ತಿ ಪಿ.ಎಸ್.**

ಕೇರಳದ ಕಾಸರಗೋಡು ಜಿಲ್ಲೆಯ ಬದಿಯಡ್ಕದವರು. ಕೊಚ್ಚಿನ್‌ನ ಖಾಸಗಿ ಕಂಪನಿಯೊಂದರ ಉದ್ಯೋಗಿ. ಕನ್ನಡ, ಮಲಯಾಳಂ ಮತ್ತು ಇಂಗ್ಲಿಷ್ ಸಾಹಿತ್ಯಗಳಲ್ಲಿ ಆಸಕ್ತಿ.